ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಮಂಜೂರಾಗಿರುವ ಹುದ್ದೆಯ ಸಂಖ್ಯೆ	ಖಾಲಿ ಹುದ್ದೆ ಸಂಖ್ಯೆ
40	ಕ್ಲೀನರ್	36	17
41	ಚೌಕಿದಾರ್	1	1
42	ದಳಾಯತ್	555	34
43	ಕೇರ್‌ಟೇಕರ್	63	33
44	ಸ್ವೀಪರ್	17	15
45	ಗಾರ್ಡನರ್	4	–
46	ಮುಖ್ಯ ಲೆಕ್ಕಾಧಿಕಾರಿಗಳು	1	–
47	ಫೈನಾನ್ಸ್ ಅಸಿಸ್ಟೆಂಟ್	1	–
48	ಆಡಳಿತಾಧಿಕಾರಿ	5	4
49	ಆಡಳಿತ ಸಹಾಯಕ	11	–
50	ವ್ಯವಸ್ಥಾಪಕರು	61	10
51	ಅಧೀಕ್ಷಕರು	167	42
52	ಶೀಘ್ರಲಿಪಿಗಾರರು	26	2
53	ಪ್ರಥಮ ದರ್ಜೆ ಸಹಾಯಕರು	550	25
54	ದ್ವಿತೀಯ ದರ್ಜೆ ಸಹಾಯಕರು	374	–
55	ಹಿರಿಯ ಬೆರಳಚ್ಚುಗಾರರು	17	–
56	ಬೆರಳಚ್ಚುಗಾರರು	101	5
57	ಸ್ವಾಗತಕಾರರು	1	–
	ಒಟ್ಟು	**10688**	**1975**

ಭಾರತೀಯ ಅರಣ್ಯ ಸೇವೆಯ ಅಧಿಕಾರಿಗಳ ವಿವರವನ್ನು ಹೊರತುಪಡಿಸಿ.

158(23) ಶ್ರೀ ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶವಿದೆ ಹಾಗೂ ಸಾಗುವಳಿಗೊಳಪಟ್ಟಿರುವ ಅರಣ್ಯ ಪ್ರದೇಶ ಎಷ್ಟು;

ಆ) ಒತ್ತುವರಿ ಸಕ್ರಮಕ್ಕಾಗಿ ಒತ್ತಾಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ಸಮಸ್ಯೆಯ ನಿವಾರಣೆಗೆ ಕೈಗೊಂಡಿರುವ ಕ್ರಮವೇನು;

ಈ) ಇದಕ್ಕೆ ಬೇಕಾಗುವ ಸಮಯಾವಕಾಶವೆಷ್ಟು?

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 38,28,430 ಹೆಕ್ಟೇರ್ ಅರಣ್ಯ ಪ್ರದೇಶವಿದೆ. 1978ರ ಪೂರ್ವದಲ್ಲಿ 24,978 ಎಕರೆ ಮತ್ತು 1978ರ ನಂತರ 1,31,958 ಎಕರೆ ಸಾಗುವಳಿಗೊಳಪಟ್ಟಿದೆ.

ಆ) ಹೌದು.

ಇ) ಈ ಒತ್ತುವರಿಗಳನ್ನು ಸಕ್ರಮಗೊಳಿಸಬೇಕಾದ್ದಲ್ಲಿ ಅರಣ್ಯ (ಸಂರಕ್ಷಣಾ) ಕಾಯ್ದೆ 1980 ರಡಿಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಬೇಕಾಗಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಹಾಗೂ ಕೇಂದ್ರ ಸರ್ಕಾರದ ನಿರ್ದೇಶನದನ್ವಯ 1980ರ ನಂತರದ ಒತ್ತುವರಿಗಳನ್ನು ತೆರವುಗೊಳಿಸಬೇಕಾಗಿದೆ. 1980ರ ಅರಣ್ಯ (ಸಂರಕ್ಷಣೆ) ಕಾಯ್ದೆ ಅಡಿಯಲ್ಲಿ ದಿನಾಂಕ: 18–9–1990ರಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ 1978 ಕ್ಕಿಂತ ಪೂರ್ವದ ಅರಣ್ಯ ಒತ್ತುವರಿಗಳ ಪೈಕಿ 14818.83 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರವು ಅನುಮೋದನೆ ನೀಡಿದೆ. ಈ ಅನುಮೋದನೆಯನ್ವಯ 3974.70 ಹೆಕ್ಟೇರ್ ಅರಣ್ಯ ಭೂಮಿಯನ್ನು ಸಕ್ರಮಗೊಳಿಸಿದೆ. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: F.No.2-3/2004-FC ದಿನಾಂಕ: 3–11–2005ರಲ್ಲಿನ ಮಾರ್ಗಸೂಚಿಯಂತೆ ಗ್ರಾಮ ಮಟ್ಟದ, ತಾಲ್ಲೂಕು ಮಟ್ಟದ ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಸಮಿತಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಅಪಜೀ 226 ಎಫ್‌ಜಿಎಲ್ 2005 ದಿನಾಂಕ: 6–3–2006 ರಲ್ಲಿ ರಚಿಸಲಾಗಿದೆ. ಈ ಸಮಿತಿಗಳು ದಿನಾಂಕ: 24–10–1980ರ ಮತ್ತು ಅದಕ್ಕಿಂತ ಹಿಂದಿನಿಂದಲೂ ಅರಣ್ಯದಲ್ಲಿ ವಾಸಿಸುತ್ತಿರುವ ಮತ್ತು ಸಾಗುವಳಿ ಮಾಡುತ್ತಿರುವ ಬುಡಕಟ್ಟು ಜನಾಂಗದವರ ಮತ್ತು ಅರಣ್ಯವಾಸಿಗಳ ಹಕ್ಕುಬಾಧ್ಯತೆಗಳನ್ನು ಪರಿಶೀಲಿಸಿ ದಾಖಲೀಕರಿಸುವ ಪ್ರಕ್ರಿಯೆಯನ್ನು ನಡೆಸುವುದು.

ಈ) ಈ ಸಕ್ರಮೀಕರಣ ಹಾಗೂ ಅನಧಿಕೃತ ಒತ್ತುವರಿಗಳನ್ನು ತೆರವುಗೊಳಿಸಲು ಸಾಕಷ್ಟು ಕಾಲಾವಕಾಶ ಹಿಡಿಯುವುದರಿಂದ ನಿರ್ದಿಷ್ಟ ಕಾಲಮಿತಿಯಲ್ಲಿ ಸದರಿ ಕಾರ್ಯವನ್ನು ಪೂರ್ಣಗೊಳಿಸಬಹುದು ಎಂಬುದಾಗಿ ಖಚಿತವಾಗಿ ತಿಳಿಸಲು ಕಷ್ಟಸಾಧ್ಯವಾಗುತ್ತದೆ. ಹಾಗಿದ್ದಗ್ಯೂ ಈ ಕಾರ್ಯವನ್ನು ಸಾಧ್ಯವಾದಷ್ಟು ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

160(340) ಶ್ರೀ ಪಾಟೀಲ್ ಬಿ.ಆರ್. (ಅಳಂದ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ ನೇರವಾಗಿ ತಹಶೀಲ್ದಾರರನ್ನು ನೇಮಕಾತಿ ಮಾಡಿ ಕೊಳ್ಳುವ ನಿರ್ಧಾರ ಅಚಲವಾದದ್ದೆ

ಆ) ಹಾಗಿದ್ದರೆ, ಇದರ ಬಗ್ಗೆ ಸರ್ಕಾರದ ಅಪಸ್ವರವೇಕೆ

ಇ) ಹಾಗಿದ್ದಲ್ಲಿ, ಸರ್ಕಾರದ ಅಂತಿಮ ನಿರ್ಧಾರವೇನು

ಈ) ಈ ಅಪಸ್ವರದಿಂದ ನೇರ ನೇಮಕಾತಿ ವಿಳಂಬವಾಗುತ್ತಿದೆಯೇ;

ಉ) ಹಾಗಿದ್ದಲ್ಲಿ, ನೇರ ನೇಮಕಾತಿ ಪ್ರಕ್ರಿಯೆ ಯಾವಾಗ ಮಾಡಿ ಮುಗಿಸಲಾಗುವುದು.

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಈ ಬಗ್ಗೆ ಇನ್ನು ಅಂತಿಮ ನಿರ್ಧಾರ ಆಗಿರುವುದಿಲ್ಲ.